ಎಂ.ವಿ.ಸಿ. ನಂಃ 48/2024
ಆರ್.ಡಬ್ಲ್ಯೂ-1 (ಗುರುನಾಥ)

ಮಧ್ಯಂತರ ಅರ್ಜಿ-5ರ ಆದೇಶದ ಮೇರೆಗೆ ದಿನಾಂಕ: 12-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಎನ್.ಆರ್. 3ನೇ ಎದುರುದಾರ ಪರ ವಕೀಲರಿಂದಃ**

ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಅಧಿಕಾರ ಪತ್ರವನ್ನು ನಿಶಾನೆ ಆರ್-1, ವಿಮೆಯ ಪ್ರತಿಯನ್ನು ನಿಶಾನೆ ಆರ್-2 ಎಂದು ಗುರುತಿಸಲಾಯಿತು. ಆದ್ದರಿಂದ ಈ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀಸವಾಲುಃ ಶ್ರೀ.ಡಿ.ಪಿ.ಎಲ್. ಅರ್ಜಿದಾರ ಪರ ವಕೀಲರಿಂದಃ**

ನಾನು ಕಳೆದ 04 ತಿಂಗಳಿಂದ 3ನೇ ಎದುರುದಾರರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ದಾಖಲೆಗಳ ಪ್ರಕಾರ ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಅರ್ಜಿದಾರರು ಈ ಅರ್ಜಿಯಲ್ಲಿ ಸಲ್ಲಿಸಿದ ದಾಖಲೆಗಳನ್ನು ನಾನು ನೋಡಿದ್ದೇನೆ.

2. ಈ ಪ್ರಕರಣದ ಬಗ್ಗೆ ನಾನು ಸ್ವತಃ ಅಪಘಾತದ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲನೆ ಮಾಡಿಲ್ಲ. ನಮ್ಮ ಕಂಪನಿಯ ತನಿಖಾಧಿಕಾರಿಗಳಿಂದ ಕೇವಲ ಪೊಲೀಸ ದಾಖಲೆಗಳನ್ನು ಪಡೆದಿರುತ್ತೇವೆ. ನಾನು ಪೊಲೀಸ ದಾಖಲೆಗಳ

ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ. ಪೊಲೀಸ ದಾಖಲೆಗಳ ಪ್ರಕಾರ ಈ ಅಪಘಾತವು ನಮ್ಮ ಕಂಪನಿಯಿಂದ ವಿಮೆ ಮಾಡಿಸಿದ ವಾಹನದ ಚಾಲಕನ ನಿರ್ಲಕ್ಷತನದಿಂದ ಸಂಭವಿಸಿದೆ ಎಂದರೆ ಸರಿಯಲ್ಲ.

3. ಪಂಚನಾಮೆಯಲ್ಲಿ ನಮ್ಮ ಕಂಪನಿಯಿಂದ ವಿಮೆ ಮಾಡಿದ ವಾಹನಕ್ಕೆ ಈ ಅಪಘಾತದಲ್ಲಿ ಏನೇನು ಜಖಂಗಳಾಗಿವೆ ಎಂದು ನಮೂದಿಸಿದ್ದಾರೆ ಎಂದರೆ ಅದು ತಪ್ಪು ಇದೆ ಎಂದು ಹೇಳುತ್ತಾರೆ. ಪೊಲೀಸರು ಸಲ್ಲಿಸಿದ ಅಂತಿಮ ವರದಿಯನ್ನು ನಾವು ಪ್ರಶ್ನಿಸಿಲ್ಲ. ನಮ್ಮ ಕಂಪನಿಯಿಂದ ವಿಮೆ ಮಾಡಿಸಿದ ವಾಹನದ ಮಾಲೀಕರಿಂದ ಅಂತಿಮ ವರದಿಯನ್ನು ಪ್ರಶ್ನಿಸಿ ಅಪೀಲು ಸಲ್ಲಿಸಲು ಯಾವುದೇ ಪ್ರಯತ್ನ ಮಾಡಿಲ್ಲ. ಈ ಅಪಘಾತವು ನಾವು ವಿಮೆ ಮಾಡಿಸಿದ ವಾಹನದ ಚಾಲಕನ ನಿರ್ಲಕ್ಷತನದಿಂದ ಸಂಭವಿಸಿದ ವಿಷಯ ನಮಗೆ ಗೊತ್ತಿದ್ದರೂ ಸಹ ಅರ್ಜಿದಾರರಿಗೆ ಪರಿಹಾರ ಕೊಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಅರ್ಜಿದಾರರಿಗೆ ಪರಿಹಾರ ಕೊಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ